**1513**

Register Number | | | | | | |

# Language — Part I — KANNADA — Paper II

Time Allowed : 3 Hours ] [ Maximum Marks : 80

I. ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಐದಕ್ಕೆ ಸಂಕ್ಷಿಪ್ತವಾಗಿ ಉತ್ತರಿಸಿ : 5 × 6 = 30

1) ಸುಬ್ಬಣ್ಣ ಹುಟ್ಟಿದಾಗ ಸಂತೋಷವಾಗಲು ಕಾರಣವೇನು ?

2) ನೀಲಾಸಾನಿ ಯಾರು ? ಅವಳು ಸುಬ್ಬಣ್ಣನಿಗೆ ಮಾಡಿದ ಸಹಾಯವೇನು ?

3) ಸುಬ್ಬಣ್ಣ ಮನೆ ಬಿಟ್ಟುಹೋಗಲು ಕಾರಣವಾದ ಘಟನೆಗಳನ್ನು ವಿವರಿಸಿ.

4) ಸುಬ್ಬಣ್ಣ ತನ್ನ ಪಿಟೀಲನ್ನು ನೀರಿಗೆಸೆದರೂ ಅದು ಮತ್ತೆ ಹಿಂತಿರುಗಿ ಬಂದ ಘಟನೆಯ ಸ್ವಾರಸ್ಯವನ್ನು ಬರೆಯಿರಿ.

5) ಸುಬ್ಬಣ್ಣ ಭೈರವೀ ರಾಗ ಹಾಡಿದ್ದೇಕೆ ?

6) ಸುಬ್ಬಣ್ಣ ಕಲ್ಕತ್ತದಲ್ಲಿ ಎದುರಿಸಿದ ಕಷ್ಟ ಪರಂಪರೆಯನ್ನು ಕುರಿತು ಬರೆಯಿರಿ.

7) ಸುಬ್ಬಣ್ಣನವರು ಎದುರಿಸಿದ ಕಷ್ಟ ಪರಂಪರೆಯೇ ಅವರನ್ನು ಒಬ್ಬ ಯೋಗಿಯನ್ನಾಗಿ ಮಾಡಿತು. ಈ ಮಾತನ್ನು ಸಮರ್ಥಿಸಿ.

II. ನಿಮ್ಮ ಶಾಲೆಯ ವಾರ್ಷಿಕೋತ್ಸವಕ್ಕೆ ಅಧ್ಯಕ್ಷರಾಗಿ ಬರಬೇಕೆಂದು ಆಹ್ವಾನಿಸಿ, ವಿದ್ಯಾಧಿಕಾರಿಗಳಿಗೆ ಒಂದು ಪತ್ರವನ್ನು ಬರೆಯಿರಿ. 1 × 10 = 10

**ಅಥವಾ**

ನಗರದಲ್ಲಿ ಶಿಕ್ಷಣ ಪಡೆಯುತ್ತಿರುವ ನೀವು ನಿಮ್ಮ ಹಾಸ್ಟೆಲ್ ಜೀವನದ ಕುರಿತು ನಿಮ್ಮ ತಾಯಿಗೆ ಒಂದು ಪತ್ರ ಬರೆಯಿರಿ.

III. ಈ ಕೆಳಗಿನವುಗಳಲ್ಲಿ ಯಾವುದಾದರೂ ಒಂದರ ಬಗ್ಗೆ ಪ್ರಬಂಧ ಬರೆಯಿರಿ : 1 × 15 = 15

1) ಪರಿಸರ ಪ್ರಜ್ಞೆ

2) ರಾಷ್ಟ್ರೀಯ ಭಾವೈಕ್ಯತೆ

3) ಕಾಲದ ಸದುಪಯೋಗ

[ Turn over

IV. ಈ ಪದ್ಯಗಳ ಸಾರಾಂಶವನ್ನು ಬರೆಯಿರಿ : 2 × 5 = 10

1) ಕೊಲುವವನೇ ಮಾದಿಗ, ಹೊಲಸ ತಿಂಬುವನೇ ಹೊಲೆಯ
ಕುಲವೇನೋ, ಆವಂದಿರ ಕುಲವೇನೋ ?
ಸಕಲ ಜೀವಾತ್ಮರಿಗೆ ಲೇಸನೇ ಬಯಸುವ
ನಮ್ಮ ಕೂಡಲಸಂಗನ ಶರಣರೇ ಕುಲಜರು.

2) ವರುಷ ತುಂಬಿದರೆ ಹೊರಮನೆಯಿಂದ ಹೊರಮನೆಗೆ
ವರ್ಗ ವರ್ಗವೆಂದರೆ ಮತ್ತೆ
ಗಂಟು ಮೂಟೆಯ ಬಿಗಿತ, ಇನ್ನಷ್ಟು ಆಯಾಸ.
ತಿರುಪಿರದ ಲಾಂದ್ರಗಳು, ತಳವಿರದ ಗೂಡೆಗಳು,
ಜರಡಿ, ತೊಟ್ಟಿಲು, ಒನಕೆ – ಇವುಗಳದೆ ಮೆರವಣಿಗೆ !

V. a) ಈ ಕೆಳಗಿನ ಗಾದೆ ಮಾತುಗಳಲ್ಲಿ ಯಾವುದಾದರೂ ಒಂದನ್ನು ಆರು ಸಾಲುಗಳಿಗೆ ಮೀರದಂತೆ ವಿವರಿಸಿ : 1 × 5 = 5

1) ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ ?

2) ಮಿಂಚಿ ಹೋದ ಕಾರ್ಯಕ್ಕೆ ಚಿಂತಿಸಿ ಫಲವಿಲ್ಲ.

3) ಬೆಳೆಯ ಸಿರಿ ಮೊಳಕೆಯಲ್ಲಿ.

b) ಕನ್ನಡಕ್ಕೆ ಭಾಷಾಂತರಿಸಿ : 10

As there are good habits, there are bad habits too. We acquire them both from our friends and from the society in which we live. Habits are easy to acquire but difficult to give up. They have a great hold on people and are not easily broken. So it is better not to acquire a bad habit than try to give it up later.